ಮೂಲಕ. ಸುದೀಪ್‌ರ ಸ್ಟೈಲಿಷ್ ವ್ಯಕ್ತಿತ್ವ ಅನಾವರಣಗೊಂಡಿದ್ದು 'ಬಿಗ್ ಬಾಸ್' ಮೂಲಕ. ಗಣೇಶ್‌ರ ಹಾಸ್ಯಪ್ರಜ್ಞೆ ಹಾಗೂ ಸಮಯಪ್ರಜ್ಞೆ ಕೂಡ ಸಹಜವಾಗಿ ಅನಾವರಣಗೊಂಡಿರುವುದು ಕೂಡ ಕಿರುತೆರೆಯಲ್ಲೇ. ಒಂದು ಕಾಲದಲ್ಲಿ ಸಿನಿಮಾ ಮಂದಿ ನೆಚ್ಚಿಕೊಂಡಿದ್ದ ಕೌಟುಂಬಿಕ ಪ್ರೇಕ್ಷಕರು ಈಗ ಟೀವಿಯತ್ತ ಮುಖ ಮಾಡಿದ್ದಾರೆ. ಈ ಮನೆಮಂದಿಗೆ ಕಲಾವಿದರು ಹತ್ತಿರವಾಗುವುದು ಅವರ ವ್ಯಕ್ತಿತ್ವದ ಕಾರಣದಿಂದಲೇ.

ಇಂದಿಗೂ ಸಿನಿಮಾ ತನ್ನದೇ ಆದ ಗ್ಲ್ಯಾಮರ್ ಉಳಿಸಿಕೊಂಡಿರುವುದು ನಿಜ. ಆದರೆ, ಆರ್ಥಿಕವಾಗಿ ಹಾಗೂ ಜನರನ್ನು ತಲುಪುವ ದೃಷ್ಟಿಯಿಂದ ಟೀವಿ ಇವತ್ತು ಸಿನಿಮಾಗಿಂತ ದೊಡ್ಡ ಮಾಧ್ಯಮವಾಗಿ ಬೆಳೆದಿರುವುದನ್ನು ಜನಪ್ರಿಯ ನಟರು ಕೂಡ ಅಲ್ಲಗಳೆಯುವುದಿಲ್ಲ.

## ಸಿನಿಮಾ ಹಿಂದಿಕ್ಕಿದ ಟೀವಿ ಮಾರುಕಟ್ಟೆ!

ಕನ್ನಡ ಚಿತ್ರರಂಗಕ್ಕೆ ಇದೀಗ ಉಬ್ಬರದ ದಿನಗಳು. ಕಳೆದ ನಾಲ್ಕೈದು ವರ್ಷಗಳಲ್ಲಿ ಪ್ರತಿ ವರ್ಷ ಸುಮಾರು ಇನ್ನೂರು ಚಿತ್ರಗಳು ನಿರ್ಮಾಣವಾಗುತ್ತಿವೆ. 25 ಲಕ್ಷದಿಂದ 20 ಕೋಟಿ ರೂಪಾಯಿಗಳವರೆಗೆ ಬಜೆಟ್ ಹೊಂದಿರುವ ಈ ಚಿತ್ರಗಳ ನಿರ್ಮಾಣದಿಂದಾಗಿ ಚಿತ್ರರಂಗದಲ್ಲಿ ವಾರ್ಷಿಕ 250ರಿಂದ 350 ಕೋಟಿ ರೂಪಾಯಿ ವಹಿವಾಟು ನಡೆಯುತ್ತಿರುವ ಅಂದಾಜಿದೆ. ಇದು ಚಿತ್ರರಂಗದ ಗಣಿತ. ಈ ಹಿನ್ನೆಲೆಯಲ್ಲಿ ಕನ್ನಡದ ಕಿರುತೆರೆಯಲ್ಲಿ ನಡೆಯುವ ವಹಿವಾಟಿನ ಮೊತ್ತ ಎಷ್ಟಿರಬಹುದು?

ಕಿರುತೆರೆಯಲ್ಲಿನ ವಹಿವಾಟು ಕಡಿಮೆಯೆಂದರೂ 3 ಸಾವಿರ ಕೋಟಿ ರೂಪಾಯಿಯಷ್ಟಿದೆ ಎನ್ನುತ್ತಾರೆ ಕಿರುತೆರೆಯ ಒಳಹೊರಗನ್ನು ಬಲ್ಲ ಲಿಂಗದೇವರು. ಅಂದರೆ, ಈ ಮೊತ್ತ ಚಿತ್ರರಂಗದ ವಹಿವಾಟಿನ ಹತ್ತು ಪಟ್ಟು ಹೆಚ್ಚು ಎಂದಾಯಿತು. ಈ ಲೆಕ್ಕಾಚಾರದ ಹಿನ್ನೆಲೆಯಲ್ಲಿ ಕನ್ನಡ ಕಿರುತೆರೆ ಚಿತ್ರೋದ್ಯಮವನ್ನು ಹಿಂದಕ್ಕೆ ಹಾಕಿ ಬಹುಕಾಲವಾಯಿತು.

ಧಾರಾವಾಹಿ ಮತ್ತು ರಿಯಾಲಿಟಿ ಷೋಗಳಷ್ಟೇ ವಾಹಿನಿಗಳ ಬಂಡವಾಳವಲ್ಲ. ಇವೆಂಟ್‌ಗಳನ್ನು ಕೂಡ ಕಿರುತೆರೆಗಳು ನಿಯಮಿತವಾಗಿ ನಡೆಸುತ್ತವೆ. ಅತ್ಯಂತ ದುಬಾರಿಯಾದ ಈ ಇವೆಂಟ್‌ಗಳಲ್ಲಿ ಚಿತ್ರರಂಗದ ತಾರಾಮೇಳವೇ ಸೇರುತ್ತದೆ. ಕಿರುತೆರೆ ಕಲಾವಿದರಿಗೆ ಸೀಮಿತವಾದ ಇವೆಂಟ್‌ಗಳು ಇರುತ್ತವೆ. ಕೆಲವು ಇವೆಂಟ್‌ಗಳಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡುವುದು, ವಾಹಿನಿಗಳಲ್ಲಿನ ಆರ್ಥಿಕ ವಹಿವಾಟಿನ ಶಕ್ತಿಯನ್ನು ಸೂಚಿಸುವಂತಿದೆ. ಇಷ್ಟಾದರೂ ಎಲ್ಲ ಇವೆಂಟ್‌ಗಳು ಹಾಗೂ ರಿಯಾಲಿಟಿ ಷೋಗಳು ವಾಹಿನಿಗಳಿಗೆ ಲಾಭದಾಯಕ ಎಂದರ್ಥವಲ್ಲ. 'ಬಿಗ್ ಬಾಸ್'ನಂಥ ಜನಪ್ರಿಯ ಷೋ ಗಮನಿಸಿದರೆ, ಆ ಷೋನಿಂದ ಲಾಭ ಮಾಡುವ ಉದ್ದೇಶಕ್ಕಿಂತಲೂ ವಾಹಿನಿಯ ಬ್ರಾಂಡ್ ವೃದ್ಧಿಸಿಕೊಳ್ಳುವ ಲೆಕ್ಕಾಚಾರವೇ ಮುಖ್ಯವಾಗಿ ಕಾಣಿಸುತ್ತದೆ.



ಲಿಂಗದೇವರು

ಧಾರಾವಾಹಿಗಳ ನಿರ್ಮಾಣದಲ್ಲಿ ಕೂಡ ಈಗ ಅದ್ದೂರಿತನ ಕಾಣಿಸಿಕೊಂಡಿದೆ. ಕೆಲವು ಎಪಿಸೋಡ್‌ಗಳನ್ನೂ ವಿದೇಶಗಳಲ್ಲಿ ಚಿತ್ರೀಕರಿಸಿರುವುದೂ ಇದೆ. ದಿನವೂ ಚಿನ್ನದ ಮೊಟ್ಟೆಯಿಡುವ ಕೋಳಿಗಳ ರೂಪದಲ್ಲಿ ಧಾರಾವಾಹಿಗಳು ಕಾಣಿಸಿಕೊಳ್ಳುತ್ತಿವೆ. ಆ ಕಾರಣದಿಂದಲೇ ಪುನೀತ್, ಸುದೀಪ್‌ರಂಥ ನಟರ ಸಂಸ್ಥೆಗಳು ಧಾರಾವಾಹಿ ನಿರ್ಮಾಣದಲ್ಲೂ ತೊಡಗಿಕೊಳ್ಳುತ್ತವೆ.

## ಎರಡು ದೋಣಿಗಳ ನಿರ್ದೇಶಕರು

ಕಲಾವಿದರು ಮಾತ್ರವಲ್ಲ, ಕೆಲವು ನಿರ್ದೇಶಕರು ಕೂಡ ಕಿರುತೆರೆಯೊಂದಿಗೆ ಗುರ್ತಿಸಿಕೊಳ್ಳುತ್ತಾರೆ. ಯೋಗರಾಜ ಭಟ್ಟರು ಚಿತ್ರವೊಂದರ ನಿರ್ದೇಶನದಲ್ಲಿ ತೊಡಗಿಕೊಂಡಿರುವ ಸಮಯದಲ್ಲೇ, ರಿಯಾಲಿಟಿ ಷೋಗೆ ಕೂಡ ಸಮಯ ಹೊಂದಿಸಿಕೊಳ್ಳುತ್ತಾರೆ. ಇನ್ನು ಕೆಲವು ನಿರ್ದೇಶಕರು ಚಿತ್ರರಂಗದಲ್ಲಿ ಅವಕಾಶ ಸಿಕ್ಕಾಗ ತಮ್ಮಿಷ್ಟದ ಸಿನಿಮಾ ರೂಪಿಸುತ್ತ, ಅನ್ನದ ಮಾರ್ಗವಾಗಿ ಕಿರುತೆರೆ ಧಾರಾವಾಹಿಗಳನ್ನು ಆರಿಸಿಕೊಳ್ಳುತ್ತಾರೆ.

ಬಿ. ಸುರೇಶ್, ಪಿ. ಶೇಷಾದ್ರಿ, ಲಿಂಗದೇವರು ರೀತಿಯ ಪ್ರತಿಭಾವಂತ ನಿರ್ದೇಶಕರು ಸಿನಿಮಾಗಳಷ್ಟೇ ಆಸ್ಥೆಯಿಂದ ಧಾರಾವಾಹಿಗಳನ್ನು ರೂಪಿಸಿರುವುದೂ ಇದೆ. ಟಿ.ಎನ್. ಸೀತಾರಾಮ್ ಅವರಂತೂ ತಮ್ಮ ಧಾರಾವಾಹಿಗಳ ಮೂಲಕ ಗಳಿಸಿದ ಜನಪ್ರಿಯತೆ ಯಾವ ಸಿನಿಮಾ ನಿರ್ದೇಶಕನಿಗೂ ಕಡಿಮೆಯಾದುದಲ್ಲ. ನಾಗತಿಹಳ್ಳಿ ಚಂದ್ರಶೇಖರ್, ಎಸ್. ನಾರಾಯಣ್, ಫಣಿ ರಾಮಚಂದ್ರ ಅವರಂಥ ಜನಪ್ರಿಯ ನಿರ್ದೇಶಕರು ಕೂಡ ಕಿರುತೆರೆ ಧಾರಾವಾಹಿಗಳ



ಕಿರುತೆರೆಯಿಂದ ಸಿನಿಮಾಕ್ಕೆ ಜಿಗಿದ ಜೆಕೆ, ಅನುಪಮಾ